# REVIEW OF RESEARCH

ISSN: 2249-894X
IMPACT FACTOR : 5.7631(UIF)
VOLUME - 12 | ISSUE - 4 | JANUARY - 2023


## ಸರ್ವಜ್ಞ ಹಾಗೂ ವೇಮನರ ಸಮನ್ವಯ ದೃಷ್ಟಿಕೋನ


**ಡಾ. ಮಹೇಶ ಎಫ್. ಗಾಜಪ್ಪನವರ**
**ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ**
**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.**


ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣೆಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಕಾಯಿ
ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವ್ಯ್ಯ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?



**–ಅಲ್ಲಮ ಪ್ರಭು.**

ಈ ಮೇಲಿನ ಮಾತು ಸರ್ವಜ್ಞ ಹಾಗೂ ವೇಮನರ ನೆಲೆಯಲ್ಲಿ ಗಮನಿಸಿದಾಗ ಅಕ್ಷರಶಃ ಸತ್ಯ. ಇವರಿಬ್ಬರ ಕಾಲಮಾನ, ಬದುಕಿದ ಪ್ರದೇಶ, ಪರಿಸರ, ಬದುಕಿನ ಘಟನೆಗಳು ವಿಭಿನ್ನವಾದರೂ ಚಿಂತನೆಗಳಲ್ಲಿ ಸಮನ್ವಯತೆ ಇದೆ. ಭಾರತೀಯ ಸಂಸ್ಕೃತಿಯು ಆಧ್ಯಾತ್ಮ ಪ್ರಧಾನವಾದದ್ದು. ಭಗವಂತನ ಸಾಕ್ಷಾತ್ಕಾರ, ಮೋಕ್ಷ ಇನ್ನಿತರವು ಮಾನವನ ಜೀವನದ ಪರಮೋಚ್ಚ ಗುರಿಯಾಗಿದೆ. ಭರತ ಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ಋಷಿಮುನಿಗಳು, ಸಾಧು–ಸಂತರು ಮಹಾಜ್ಞಾನಿಗಳು ಜನಿಸಿ ಈ ಧರೆಯನ್ನು ಪುಣ್ಯ ಭೂಮಿಯನ್ನಾಗಿಸಿದ್ದಾರೆ. ಅಂತಹ ಮಹಾಜ್ಞಾನಿ, ಸಂತರಲ್ಲಿ ಸರ್ವಜ್ಞ ಹಾಗೂ ವೇಮನರು ಪ್ರಮುಖರಾದವರು.

ಆಧ್ಯಾತ್ಮಿಕ ಪ್ರಪಂಚದಲ್ಲಿ ಮುಳುಗಿದ ಅನೇಕ ಸಂತರ ಜೀವನವನ್ನು ಗಮನಿಸಿದಾಗ ವಿಶೇಷವಾಗಿ ಗಮನಸೆಳೆಯುವಂತದ್ದು ಅವರ ವೈಯಕ್ತಿಕ ಜೀವನದ ಹತಾಶೆ ಇವು ಹಲವು ಸಂತರನ್ನು ಜ್ಞಾನದ ಅನ್ವೇಷಕರನ್ನಾಗಿ ಮಾಡಿದೆ. ಅದು ಗೌತಮ ಬುದ್ಧನಿಂದ ಹಿಡಿದು ಸರ್ವಜ್ಞ ಕನಕದಾಸರವರೆಗೆ ಇಂಥ ಪರಂಪರೆಯೊಂದು ಚಾಚಿಕೊಂಡಿದೆ. ಮುಖ್ಯವಾಗಿ ಅಂತರಂಗದ ಆಧ್ಯಾತ್ಮಿಕ ಸೆಳೆತ ಮತ್ತು ಲೌಕಿಕದ ಸಾಮಾಜಿಕ ಅನಿಷ್ಟಗಳನ್ನು ಇವರ ಮನಸ್ಸನ್ನು ಕ್ಷೋಭೆಗೆ ಒಳಪಡಿಸಿದೆ ಎಂಬಂತೆ ಕಾಣಿಸುತ್ತವೆ. ಈ ನೆಲೆಯಲ್ಲಿ ಗಮನಿಸಿದಾಗ ಕೆಲವರು ಪಾರಮಾರ್ಥಿಕತೆಗಷ್ಟೇ ಸೀಮಿತಗೊಳಿಸಿಕೊಂಡರೆ ಇನ್ನು ಕೆಲವರು ಸಮಾಜಾಭಿಮುಖವಾಗಿ ಹರಿಯ ಬಿಟ್ಟಿರುವುದು ವಿಶೇಷ. ಪ್ರಸ್ತುತ ಲೇಖನದಲ್ಲಿ ಸರ್ವಜ್ಞ ಮತ್ತು ವೇಮನರ ವೀರಧಾರೆಗಳಲ್ಲಿ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಂವೇದನೆಯ ಸ್ವರೂಪ ಸ್ಪಷ್ಟವಾಗಿ ಎದ್ದು ಕಾಣುವಂತದ್ದು.

ಸರ್ವಜ್ಞನು ವಿಚಾರಶೈವತತ್ತ್ವಕ್ಕೆ ಬದ್ಧವಾಗಿ ವಚನ ಸಾಹಿತ್ಯ ಮಾದರಿಯಲ್ಲಿ ಸಾಹಿತ್ಯವನ್ನು ನಿರ್ಮಿಸಿದರೆ, ವೇಮನರು ಹರಿಭಕ್ತಿಯನ್ನು ಪ್ರತಿಪಾದಿಸಿದ್ದಾರೆ. "ಲೌಕಿಕ ಜೀವನದ ಬಗ್ಗೆ ವೈರಾಗ್ಯ ಮೂಡದ ಹೊರತು ಮನುಷ್ಯ ಅಲೌಕಿಕದ ಕಡೆಗೆ ಸಂಪೂರ್ಣವಾಗಿ ತಿರುಗಲಾರನೆಂಬುದೇ" ಎಲ್ಲ ಭಕ್ತಿ ಮಾರ್ಗಗಳ ತಿಳುವಳಿಕೆಯಾಗಿದೆ. ಲೌಕಿಕ ಮತ್ತು ಅಲೌಕಿಕ ಬದುಕಿನ ಅರ್ಥವನ್ನು ಮನಗಾಣಿಸುವ ಕೆಲಸವನ್ನು ಈ ಸಂತರು ಮಾಡಿದ್ದಾರೆ. ಅದರ ಸಂಕ್ಷಿಪ್ತ ಚರ್ಚೆಯನ್ನು ಈ ಲೇಖನದಲ್ಲಿ ಕೈಗೊಳ್ಳಲಾಗಿದೆ.

### ಜೀವನ :

ಸರ್ವಜ್ಞನು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಅಬಲೂರಿನಲ್ಲಿ ಜನಿಸಿದವರು. ತಂದೆ ಬಸವರಸ ತಾಯಿ ಕುಂಬಾರ ಮಾಳಿ. ಈ ಬಸವರಸನು ಮಾಸೂರಿನ ಬ್ರಾಹ್ಮಣನಾಗಿದ್ದನು. ಸರ್ವಜ್ಞನು ೧೫–೧೬ನೆಯ ಶತಮಾನದಲ್ಲಿ ಬಂದರೂ ಸಹ ಜೀವನದ ಕಾಲಘಟ್ಟವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ ಆದರೂ ರೆವರೆಂಡ್, ಉತ್ತಂಗಿ ಚನ್ನಪ್ಪನವರು ಕ್ರಿ.ಶ. ೧೪೬೯ ರಿಂದ ೧೫೨೦–೨೦ ಎಂದು ಅಭಿಪ್ರಾಯಪಡುತ್ತಾರೆ. ಸರ್ವಜ್ಞನು ತಾನು ಶಿವ ಪ್ರಸಾದದಿಂದ ಜನಿಸಿದ ವರಪುತ್ರನೆಂದು

'ಸರ್ವರೊಳು ಒಂದೊಂದು ಗುನುಡಿಗಲಿತು ವಿದ್ಯೆಯ ಪರ್ವತವೇ ತಾನಾದನೆಂದು' ಹೇಳಿಕೊಳ್ಳುತ್ತಾನೆ. ಸರ್ವಜ್ಞ ಒಂದೆಡೆ ನೆಲೆನಿಂತವನಲ್ಲ, ಸಂಸಾರಿಯಲ್ಲ ಆದರೂ ಜೀವನದ ಬಹುಮುಖ ಅನುಭವಗಳನ್ನು ಪಡೆದಿದ್ದ ಸೀಮಾತೀತ ವ್ಯಕ್ತಿತ್ವದವನು. ಇವನು ಸುಮಾರು ೨೦೨೦ ವಚನಗಳನ್ನು ರಚಿಸಿದ್ದಾನೆಂದು ಹೇಳಲಾಗುತ್ತದೆ.

ಇನ್ನು ಯೋಗಿ ವೇಮನರ ಬಗ್ಗೆ ಅರಿಯದ ತೆಲುಗನಿಲ್ಲ. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿ ಕನ್ನಡಿಗರೂ ಇಲ್ಲ. ತೆಲಗು ಭಾಷೆಯ ಶ್ರೇಷ್ಠ ದಾರ್ಶನಿಕ ಕವಿ. ವೇಮನರ ಪದ್ಯಗಳನ್ನು ಆಧರಿಸಿ ಹೇಳುವುದಾದರೆ ಕ್ರಿ.ಶ.೧೩೮೬ ರಿಂದ ೧೪೨೬ ರವರೆಗೆ ಕೊಂಡವೀಡು ಪ್ರದೇಶವನ್ನು ಆಳಿದ ಕೊಮರಗಿರಿ ವೇಮಭೂಪಾಲನ ಮೂರನೆಯ ಮಗನೇ ವೇಮನ. ಇವರು ಸೋಮಶೇಖರ ಗುರುಗಳಲ್ಲಿ ಸಂಸ್ಕೃತ ಮತ್ತು ತೆಲಗು ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದರು. ಜೀವನದ ೨೦ ವರ್ಷಗಳನ್ನು ರಾಜವಿಲಾಸದಲ್ಲಿ ಕಳೆದನು. ಮುಂದೆ ರಡ್ಡಿ ಸಾಮ್ರಾಜ್ಯದ ಏಳು ಬೀಳುಗಳಿಂದ ಪಾಪಂಚಿಕ ಸಂಬಂಧ ತೊರೆದು ವೈರಾಗ್ಯ ಹೊಂದಿದನು. ದ್ಯಾಂಪೂರ ಚೆನ್ನ ಕವಿಗಳು ವೇಮನನ ಈ ವೈರಾಗ್ಯಕ್ಕೆ ಮಲ್ಲಮ್ಮನ 'ನತ್ತಿ'ನ ಪ್ರಸಂಗವನ್ನು ಹೆಣೆದಿದ್ದಾರೆ.

ಅದೇನೆ ಇರಲಿ ವೇಮನನು ನಿಷ್ಕಳಂಕ ರೀತಿಯಲ್ಲಿ ತನ್ನು ಶೇಷಾಯುಷ್ಯವನ್ನು ಕಳೆದು ಒಳ್ಳೆಯ ಸಮಾಜ ಚಿಂತಕನಾಗಿ ತನ್ನ ಲೌಕಿಕ ಮತ್ತು ಆಧ್ಯಾತ್ಮಿಕ ಅನುಭವಗಳನ್ನು ಪದ್ಯ ರೂಪದಲ್ಲಿ ಹಿಡಿದಿಡುತ್ತ ತನ್ನ ೬೮ನೇಯ ವಯಸ್ಸಿನಲ್ಲಿ ಕಟಾರುಪಳ್ಳಿಯಲ್ಲಿ ದೇಹ ತೊರೆದನು.

ಹೀಗೆ ಸರ್ವಜ್ಞ-ವೇಮನರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಅನುಭಾವ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ವಚನಗಳ ಮೂಲಕ ಸಾಹಿತ್ಯ ಸಂಸ್ಕೃತಿಗೆ ಅಮೂಲ್ಯ ಕಾಣಿಕೆಗಳನ್ನು ಕೊಟ್ಟು ಇವರಿಬ್ಬರೂ ಹರಿಹರನ ಹೆಸರಿಗೆ ಅನ್ವರ್ಥರಾದರು.

## ಸರ್ವಜ್ಞ ಮತ್ತು ವೇಮನರ ಸಮನ್ವಯ ದೃಷ್ಟಿಕೋನ :

### ವಿಶ್ವಮಾನತ್ವದೆಡೆ :

ದೇವರ ಅಸ್ತಿತ್ವದಲ್ಲಿ ಮತ್ತು ಏಕದೇವೋಪಾಸನೆಯಲ್ಲಿಯೇ ಇಬ್ಬರಿಗೂ ದೃಢ ವಿಶ್ವಾಸವಿದೆ. ಅದಕ್ಕೆ ಸರ್ವಜ್ಞ

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೇ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ

ಎಂದು ಹೇಳಿರುವುದಲ್ಲದೆ

'ಒಬ್ಬನಲ್ಲದೆ ಜಗಕೆ। ಇಬ್ಬರುಂಟೆ ಮತ್ತೆ
ಒಬ್ಬ ಸರ್ವಜ್ಞ ಕರ್ತನೀ ಜಗಕ್ಕೆಲ್ಲ
ಒಬ್ಬನೇ ದೈವ ಸರ್ವಜ್ಞ.... ಎಂದರೆ'

ವೇಮನ ಕೂಡ ಆ ನೆಲೆಯಲ್ಲಿಯೇ

ದ್ವಜವನೆತ್ತಿ ಸಾರು. ದೇವನೊಬ್ಬನೆಂದು
ನಿಜದಿಹುದು ಒಳಗೆ ನಿಂತಿರುವನು
ಮೌನವಾಗಿರುವವ ಮಹಿಮೋತ್ತಮ ಕಣಾ।
ವಿಶ್ವಧಾಭಿರಾಮ ಕೇಳು ವೇಮ.

ಎಂದು ನಿರಾಕಾರವಾದ ದೇವರಿಗೆ ಮೂರ್ತಿ ಪೂಜೆ ಮಾಡುವುದನ್ನು ಇಬ್ಬರೂ ಖಂಡಿಸಿದ್ದಾರೆ.

ಮುಂದುವರೆದು ವೇಮನ
'ಮನಸಿನಲಿ, ಮುಕ್ತಿ ಮತ್ತೆ ಬೇರೆ ಕಡೆಗೆ
ಹುಡುಕ ಹೋಗುವವನು ಹುಚ್ಚನಷ್ಟೆ।
ಕುರಿಯ ಬಗಲೊಳಿಟ್ಟು ಕುರುಬ ಹುಡುಕುವಂತೆ
ವಿಶ್ವದಭಿರಮ ಕೇಳು ವೇಮ ಎಂದು ವಿಡಂಬಿಸಿದ್ದಾನೆ.

ಇದನ್ನೇ ಸರ್ವಜ್ಞ – ಕಳ್ಳಿಯೊಳು ಹಾಲು ಮುಳ್ಳುಗಳ್ಳಿಯೊಳು ಹೆಜ್ಜೇನು
ಎಳ್ಳಿನೊಳಗೆಣ್ಣೆ ಹಗಿದಿರಲು
ಶಿವಲೀಲೆ ಸುಳ್ಳೆನಬಹುದೆ? ಎಂದು ಕೇಳಿದ್ದಾನೆ. ದೇವರನ್ನು ಕಾಣಲು ಶುದ್ದ ಹೃದಯಬೇಕು.

'ತನ್ನ ಅರಿವೆ-ತನಗೆ ಗುರು' ಎಂದು ಇಬ್ಬರೂ ಸ್ಪಷ್ಟಪಡಿಸಿದ್ದಾರೆ.

**ಸಾಮಾಜಿಕ ವಿಡಂಬನೆಗಳು :**

ಸರ್ವಜ್ಞ ಮತ್ತು ವೇಮನರು ಆಂತರಿಕ ಮತ್ತು ಬಹಿರಂಗದ ವಿಚಾರದಲ್ಲಿ ಅಷ್ಟೇ ದಿಟ್ಟವಾಗಿ ತಮ್ಮ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಅದರಲ್ಲೂ ಸಮಾಜದಲ್ಲಿ ದೋಷಗಳು, ಕಂದಾಚಾರ, ಮೌಢ್ಯಗಳ ವಿಚಾರ ಬಂದಾಗ ಅವರ ಪ್ರತ್ರಿಕ್ರಿಯೆ ತುಂಬಾ ತೀಕ್ಷ್ಣವಾದುದು ಮತ್ತು ಹರಿತವಾದುದು. ಉದಾಹರಣೆಗೆ ಪ್ರಾಣಿಹಿಂಸೆಯ ಕುರಿತಾಗಿ

ಸರ್ವಜ್ಞ – ಯಾಗದ ನೆಪದಿಂದ ತೂಗಿ ತಿಂಬರು ಆಡ
ಯಾಗದಲೊಂದು ದಿಟವಿರಲು ಹೋತುಗಳ
ನಾಗಲೀಸುವರೆ ಸರ್ವಜ್ಞ, ಎಂದರೆ----

ವೇಮನ – ಸೋಮಯಾಜಿಯೆಂಬ ಸೊಂಪನ ವೇಷದವ
ಮಾಂಸ ರುಚಿಯ ಪಾಕ ಮಾಡಿ ತಿನುವ
ಮತ್ತೆ ದ್ವಿಜನು ಎನುತ ಮರೆಯಬಲ್ಲನೆಂತು?
ವಿಶ್ವದಾಭಿರಾಮ ಕೇಳುವೇಮ

ಹಾರವರು ನಡೆಸುತ್ತ ಬಂದ ಧಾರ್ಮಿಕ ಶೋಷಣೆಯನ್ನು ಖಂಡಿಸುವಲ್ಲಿ ಇಬ್ಬರದೂ ಒಂದೇ ಧ್ವನಿಯಾಗಿದೆ.

**ಸಂಸಾರ :**

ದಾಂಪತ್ಯ ಎನ್ನವೊಂದೊಂದು ಧರ್ಮ. ಪರಸ್ಪರ ಹೊಂದಾಣಿಕೆ, ಗೌರವ, ಸಹಕಾರ ಅವರ ತತ್ವಗಳು. ಇವೆಲ್ಲವೂ ಪರಸ್ಪರ ಹೊಂದಿದ್ದರೆ ಮಾತ್ರ ಸಂಪೂರ್ಣ ದಾಂಪತ್ಯ ಎಂದು ಈ ಇಬ್ಬರೂ ಸಂತರು ಹೇಳುವ ರೀತಿ ಈ ಕೆಳಗಿನಂತಿದೆ.

ಬೆಚ್ಚನಾ ಮನೆಯಾಗಿ। ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನು ಅರಿವ ಸತಿಯಾಗಿ, ಸ್ವರ್ಗಕ್ಕೆ।
ಕಿಚ್ಚು ಹಚ್ಚೆಂದ। ಸರ್ವಜ್ಞ

ಇದನ್ನೇ ವೇಮನ– ಸಗುಣವಂತೆ ಕಾಂತೆ ಸುಮತಿಯಾಗಿರ್ದೊಡೆ
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸಗ್ಗಪೀತಕಯ್ಯಾ ? ಸಂಸಾರ ಸಾಲದೆ?
ವಿಶ್ವದಾಭಿರಾಮ ಕೇಳು ವೇಮ

ಎಂದು ಗುಣವಂತ ಹೆಂಡತಿ, ಬುದ್ಧಿವಂತ ಮಕ್ಕಳು ಎಲ್ಲರೂ ಇದ್ದರೆ ಸ್ವರ್ಗ ಯಾಕೆ ಬೇಕು? ಎಂದು ಪ್ರಶ್ನಿಸುತ್ತಾನೆ.

ಅಷ್ಟೇ ಅಲ್ಲ ಸ್ತ್ರೀಯಳನ್ನು ತುಂಬಾ ಗೌರವದಿಂದ ಅವಳ ಅವಶ್ಯಕತೆಯನ್ನು ತುಂಬಾ ಚೆನ್ನಾಗಿ ಹೇಳಿದ್ದಾರೆ.

ಸರ್ವಜ್ಞ – ಮಗಳಕ್ಕ ತಂಗಿಯ। ಮಿಗೆ ಸೊಸೆಯ ನಾದುನಿಯ।
ಜಗದ ವನಿತೆಯರು, ಜನನಿಯು, ಇವರೊಳಗೆ।
ಜಗಕ್ಕೊಬ್ಬಳೈಸೆ ಸರ್ವಜ್ಞ

ವೇಮನ – ಹೆಂಡತಿಯನೆ ಆತ್ಮಕಣಾ ।
ಹೆಂಡತಿಯೆನೆ ತಾಯಿ ಕಣಾ ಅರಿತೊಡೆಮನದೊಳ್
ಹೆಂಡತಿ ತಾಯಿಯೆನಲರು?
ಕಂಡರಿಯಬೇಕಿದೆ ತಪ್ಪದಂತೆ ವೇಮ.

ಹೆಂಡತಿಯ ಪಾತ್ರ ಹಿರಿದಾದದು ಆಕೆಯನ್ನು ಗೌರವಿಸಬೇಕು ಎಂಬುದು ಇವರಿಬ್ಬರ ಆಶಯವಾಗಿದೆ.

ಸಾಮಾಜಿಕತೆ : ಸಲ ಮಾಡಿದವರ ಹಾಗೂ ಸಾಲ ವಸೂಲಿ ಮಾಡುವವರ ಕುರಿತು ತುಂಬಾ ಚೆನ್ನಾಗಿ ಹೇಳಿದ್ದಾರೆ.

ಸರ್ವಜ್ಞ – ಕೊಟ್ಟು ಕುದಿಯಲು ಬೇಡ। ಕೊಟ್ಟು ಮರುಗಲು ಬೇಡ
ಕೊಟ್ಟು ನಾ ಕೆಟ್ಟನೆನಬೇಡ – ಶಿವನಲ್ಲಿ
ಕಟ್ಟಿಹುದು ಬುತ್ತಿ ಸರ್ವಜ್ಞ

ಸಾಲ ಕೊಟ್ಟು ಮರುಗುವುದು, ಕೆಟ್ಟೆನೆನ್ನವುದು ಬೇಡ ಎಂದು ಹೆಳಿದ್ದಾರೆ.

ವೇಮನ– 'ಸಾಲಕೊಟ್ಟ ಹಣವ ಸರಸದಿಂದ ಕೇಳೆ
ಎಂದು ಕೊಟ್ಟಿಯೆಂದು ಎಗರಿ ಬಿದ್ದು
ತಪ್ಪು ನೊಪ್ಪು ಮಾಡೆ ತಾನೇ ಸರಿಯೆನಿಪುದೆ?

ವಿಶ್ವದಾಭಿರಾಮ ಕೇಳು ವೇಮ'

ಎಂದು ವೇಮನ ಸಾಲ ವಸೂಲಿ ಮಾಡುವ ಬಗೆಯನ್ನು, ಜಾಣತಣವನ್ನು ತಿಳಿಸುತ್ತಾನೆ.

ಹೀಗೆ ಸರ್ವಜ್ಞ ಮತ್ತು ವೇಮನ ಭಕ್ತಿ, ಜ್ಞಾನ, ವೈರಾಜ್ಯ, ಸಂಸಾರಿಕ, ಕೌಟುಂಬಿಕ, ನೈತಿಕ, ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ನೇಮ–ನೀತಿ, ಆಚಾರ–ವಿಚಾರ, ನಡೆ–ನುಡಿ, ಹೀಗೆ ಸಾಕಷ್ಟು ವಿಷಯಗಳ ಮೇಲೆ ಬೆಳಕು ಚೆಲ್ಲುವ ವಿಚಾರಗಳನ್ನು ತಮ್ಮ ಭಾವಾಭಿವ್ಯಕ್ತಿಯ ನೆಲೆಯಲ್ಲಿ ತೆಗೆದುಕೊಂಡು ಅದಕ್ಕೆ ಸೂಕ್ತವಾದ ಮರ್ಗದರ್ಶನ ಮಾಡಿದ್ದಾರೆ. ಅವರ ನುಡಿಯಲ್ಲಿ ಪ್ರೀತಿಯಿದೆ–ವಾತ್ಸಲ್ಯವಿದೆ. ಅಷ್ಟೇ ಕಠೋರತೆ ಕೂಡ ಇದೆ. ಪರಿಶ್ರಮವಿಲ್ಲದೆ ಫಲಾಫೇಕ್ಷೆ ಪಡೆಯುವರಿಗೆ ಇದರಲ್ಲಿ ಇಂಬಿಲ್ಲ. ಸತ್ಯ, ಶಾಂತಿ, ದಯೆ, ಅಹಿಂಸೆ, ದೈವಚಿಂತನಾ, ಸದ್ಗುಣಗಳಿಗೆ ಅವರು ಪ್ರಶಸ್ತ್ಯವಿದೆ. ಇವೆಲ್ಲದರಲ್ಲಿಯೇ ಸಾರ್ಥಕತೆ ಇದೆ ಎಂಬುದು ಅವರ ವಚನಗಳಲ್ಲಿ ನಾವು ಕಾಣುವಂತಹದು. 'ಆತ್ಮಜ್ಞಾನಿಗೆ ಜತಿ ಮತಗಳೆಲ್ಲ ಒಂದೇ ಎಂಬ ರತ್ನಾಕರವರ್ಣಿಯ ಉಕ್ತಿಗೆ ದೃಷ್ಟಾಂತರಾದವರು ಸರ್ವಜ್ಞ ಮತ್ತು ವೇಮನ. ಇವರಿಬ್ಬರ ವಿಚಾರ ಧಾರೆಗಳು ಪ್ರಸ್ತುತ ದಿನಮಾನಗಳಲ್ಲೂ ಜ್ಞಾನದೀವಿಗೆಗಳು, ದಿಕ್ಕು ದಿಕ್ಸೂಚಿ ತೋರಿಸುವ ದಿಕ್ಸೂಚಿಗಳು ಎಂದರೆ ತಪ್ಪಾಗಲಾರದು.'

**ಪರಾಮರ್ಶನ ಗ್ರಂಥಗಳು :**

೧. ಸರ್ವಜ್ಞನ ವಚನಗಳು (ಚನ್ನಪ್ಪ ಉತ್ತಂಗಿ ಸಂಪಾದಿತ)– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ಪ್ರ. ೨೦೦೫.

೨. ವೇಮನ ವಿಶ್ವಗೀತೆ – ಶ್ರೀ ಎಸ್. ಆರ್. ಪಾಟೀಲ, ಮಹಾಯೋಗಿ ವೇಮನ ಪೀಠ, ಕ.ವಿ.ವಿ. ಧಾರವಾಡ–೧೯೯೮.

೩. ದಾರ್ಶನಿಕ ವೇಮನ –ಮೊ. ಮು. ಆಂಜನಪ್ಪ ರೆಡ್ಡಿ, ೨೦೧೨